ದಿನಾಂಕ: 23.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ಕಂಡೇನಹಳ್ಳಿ ಗ್ರಾಮದ ಸರ್ವೆ ನಂ.161 ದಾಸೇಗೌಡ, ಕೃಷ್ಣೆಗೌಡ ಚನ್ನಪ್ಪ ರವರಿಗೆ ಸೇರಿತ್ತು. ಅವರ ವಿರುದ್ಧ ಕೇಸ್ ಹಾಕಿಲ್ಲ. ಅವರ ಈಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ವಾರಸುದಾರರು ಇರುತ್ತಾರೆ. ಆ ವಾರಸುದಾರರ ವಿರುದ್ಧ ಸರ್ವೆ ನಂ. 161 ನ್ನು ಭಾಗ ಮಾಡಿಕೊಂಡಿರುವುದು ತಪ್ಪು ಎಂದು ನಾನು ದಾವೆ ಸಲ್ಲಿಸಿಲ್ಲ. 30.04.1973 ರಂದು ಅಂಜನಗೌಡ, ಕೃಷ್ಣೇಗೌಡ ಚನ್ನಪ್ಪ ಇವರು ನೊಂದಾಯಿತ ವಿಭಾಗ ಪತ್ರದ ಮೂಲಕ ಸರ್ವೆ ನಂ 161 ನ್ನು ಹಂಚಿಕೊಂಡಿದ್ದಾರೆ ಎಂದರೆ ಸಾಕ್ಷಿ ಮುಂದುವರೆದು 1966 ರಲ್ಲಿ ಹಂಚಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.161 ರಲ್ಲಿ 60 ಎಕರೆ 5 ಗುಂಟೆ ಪೈಕಿ , 30 ಎಕರೆ 24 ಗುಂಟೆ ಜಮೀನನ್ನು ಕೃಷ್ಣೇಗೌಡ, ಅಂಜನಪ್ಪ, ಗಂಗಪ್ಪ, ಹನುಮಂತರಾಯಪ್ಪ ಬಿನ್ ದಾಸೆಗೌಡ ಇವರ ಹೆಸರಿಗೆ ನಿಪಿ-16 ರಂತೆ ಬಂದಿವೆ ಎಂದರೆ ಸಾಕ್ಷಿ 36 ಎಕರೆ 24 ಗುಂಟೆ ಬಂದಿದೆ ಎಂದು ಹೇಳುತ್ತಾರೆ. ಚನ್ನಪ್ಪ ಬಿನ್ ಭೀಮಣ್ಣ, 2 ನೇ ಕೆ ಚನ್ನಪ್ಪ ಬಿನ್ ಕೃಷ್ಣೇಗೌಡ , 3 ನೇ ಹನುಮಂತಪ್ಪ ಬಿನ್ ಚನ್ನಪ್ಪ, 4 ನೇ ಗೋಪಾಲಪ್ಪ ಬಿನ್ ಚನ್ನಪ್ಪ ಇವರಿಗೆ ಸರ್ವೆ ನಂ.161 ರ ಪೈಕಿ 36 ಎಕರೆ 26 ಗುಂಟೆ ಆಸ್ತಿ ಬಂದಿದೆ ಎಂದು ನಿಪಿ-16 ರಲ್ಲಿ ನಮೂದು ಇದೆ ಎಂದರೆ ನಿಜ.

ಓಎಸ್ ನಂ.104/2005 ರ ದಾವೆಯಲ್ಲಿ ದಾವಾ ಷಡ್ಯೂಲ್ ಗೆ ಸಂಬಂಧಪಟ್ಟಂತೆ ಚೆಕ್ಕು ಬಂದಿ ತೋರಿಸಲು ನೊಂದಾಯಿತ ದಾಖಲೆ ಹಾಜರು ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. 1973 ರಲ್ಲಿ ನಿಪಿ-16 ರ ಪ್ರಕಾರ 67 ಎಕರೆ 10 ಗುಂಟೆ ಜಮೀನನ್ನು ಕೃಷ್ಣಪ್ಪ , ಅಂಜನಪ್ಪ, ಗಂಗಪ್ಪ, ಹನುಮಂತರಾಯಪ್ಪ ಬಿನ್ ದಾಸಪ್ಪ , ಚನ್ನಪ್ಪ ಬಿನ್ ಭೀಮಣ್ಣ, 2 ನೇ ಕೆ ಚನ್ನಪ್ಪ ಬಿನ್ ಕೃಷ್ಣೇಗೌಡ , 3 ನೇ ಹನುಮಂತಪ್ಪ ಬಿನ್ ಚನ್ನಪ್ಪ, 4 ನೇ ಗೋಪಾಲಪ್ಪ ಬಿನ್ ಚನ್ನಪ್ಪ ಇವರುಗಳು ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ರೀತಿ ಹಂಚಿಕೊಂಡಿರುವುದು ತಪ್ಪು ಎಂದು ನಾನು

ಕೇಳಿಲ್ಲ. 1973 ರಲ್ಲಿ ವಿಭಾಗ ಮಾಡಿಕೊಂಡ ನಂತರ ಅವರು  1985 ರಲ್ಲಿ ಆಸ್ತಿಯನ್ನು ವಾದಿಯ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳ ತಂದೆ ಖರೀದಿ ಮಾಡಿದ ನಂತರ  ಅವರ ನಂತರ ವಾದಿಯ ತಾಯಿ ಮತ್ತು ವಾದಿಗಳೇ ಸದರಿ ಆಸ್ತಿಯ ಹಕ್ಕು ಮತ್ತು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ವಾದಿಯ ತಂದೆ ಕೊಂಡ ಜಮೀನನ್ನು ರೆವಿನ್ಯು ಇಲಾಖೆಯವರು ಸರ್ವೆ ಮಾಡಿ ಸರ್ವೆ ನಂ.161 ರ ಪೈಕಿ 9 ಎಕರೆ 8 ಗುಂಟೆ ಆಸ್ತಿಯನ್ನು ಎರಡು ಪೋಡ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸೃಷ್ಟಿ ಮಾಡಿಕೊಂಡಿದ್ದಾರೆ  ಎಂದು ನುಡಿಯುತ್ತಾರೆ. 1987 ರಿಂದ ಕೂಡ ಸ್ಕೆಚ್ ಜಾರಿಯಲ್ಲಿ ಇದೆ ಎಂದರೆ ಸರಿಯಲ್ಲ. ವಾದಿಯರೇ ಆ ಆಸ್ತಿಗೆ ಕಂದಾಯ ಕಟ್ಟಿಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಮ್ಮ ಪೂರ್ವಜರು 15 ಎಕರೆ ಆಸ್ತಿ ಕೊಂಡುಕೊಂಡಿರುತ್ತಾರೆ. ಸರ್ವೆ ನಂ.161 ನ್ನು ಖರೀದಿ ನಂತರ ಅದೇ ಆಸ್ತಿ ಖರೀದಿಸಿದ್ದೇವೆ ಎಂದು ಸರ್ವೆ ಮಾಡಿಸಿಲ್ಲ.  ನಮ್ಮ ಪೂರ್ವಜರು ಕೊಂಡುಕೊಂಡ ಜಮೀನಿನಲ್ಲಿ ನಾನು ಸ್ವಾದೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ಸರ್ವೆ ಮಾಡಿಸಿದ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಜ್ಞಾಪಕ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಅರ್ಜಿ ಕೊಟ್ಟಿದ್ದೆನೋ ಇಲ್ಲವೋ ಜ್ಞಾಪಕ ಇಲ್ಲ. ಸರ್ವೆ ನಂ.161 ರಲ್ಲಿ ಯಾವುದೇ ತುಂಡು ಜಾಗದಲ್ಲಿ ನಾವು ಸ್ವಾದೀನವಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನಲ್ಲಿ ಬೆಳೆ ಬೆಳೆಯುತ್ತಿರುವ ಬಗ್ಗೆ ದಾಖಲೆಗಳನ್ನು ಇಟ್ಟಿಲ್ಲ ಸಾಕ್ಷಿ ಮುಂದುವರೆದು ಬೆಳೆ ಬಳೆಯುವ ಬಗ್ಗೆ ಏನು ದಾಖಲಾತಿ ಇರುತ್ತವೆ ಎಂದು ನುಡಿಯುತ್ತಾರೆ.

ನಾನು ಸಿದ್ದವೀರಪ್ಪ ಇವರ ವಂಶಸ್ಥನೇ ಅಲ್ಲ ಎಂದರೆ ಸರಿಯಲ್ಲ. ನಾನು ಸಿದ್ದವೀರಪ್ಪನ ವಂಶಸ್ಥರು ಎಂದು ತೋರಿಸಲು ವಂಶವೃಕ್ಷ ಬಿಟ್ಟು ಬೇರೆ ದಾಖಲೆ ಇಲ್ಲ. ನೀವು  ಅವರ ವಂಶಸ್ಥರು ಅಲ್ಲದೇ ಇದ್ದ ಕಾರಣ ಯಾವುದೇ ದಾಖಲೆಗಳು ನಿಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಿದ್ದವೀರಪ್ಪನವರಿಗೆ ಯಾವುದೇ ಜಮೀನು ಮಾರಾಟ ಮಾಡದೇ

ಇದ್ದುದ್ದರಿಂದ ಕೃಷ್ಣಪ್ಪ , ಅಂಜನಪ್ಪ, ಗಂಗಪ್ಪ, ಹನುಮಂತರಾಯಪ್ಪ ಬಿನ್ ದಾಸಪ್ಪ , ಚನ್ನಪ್ಪ ಬಿನ್ ಭೀಮಣ್ಣ, 2 ನೇ ಕೆ ಚನ್ನಪ್ಪ ಬಿನ್ ಕೃಷ್ಣೇಗೌಡ , 3 ನೇ ಹನುಮಂತಪ್ಪ ಬಿನ್ ಚನ್ನಪ್ಪ, 4 ನೇ ಗೋಪಾಲಪ್ಪ ಬಿನ್ ಚನ್ನಪ್ಪ ಇವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು